AKSHARASURYA
E-ISSN: 2583-620X
Peer-Reviewed, Multi Lingual E-Journal
Volume – 02, Issue – 03, March 2023.

# ತುಮಕೂರು ಪರಿಸರದ ತತ್ವಪದಕಾರರ ಪರಿಚಯ

**ಉಮೇಶ್ ನಾಯ್ಕ್ ಎನ್. ಹುಳಿಯಾರ್**
ಸಂಶೋಧನಾ ವಿದ್ಯಾರ್ಥಿ
ಕನ್ನಡ ಅಧ್ಯಯನ ಕೇಂದ್ರ, ಜ್ಞಾನಭಾರತಿ ಆವರಣ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು-560056

ಕನ್ನಡ ನೆಲದಲ್ಲಿ ವಚನ ಸಾಹಿತ್ಯ ಚಳುವಳಿ ಮತ್ತು ದಾಸ ಸಾಹಿತ್ಯ ಚಳುವಳಿಯ ನಂತರ 17 ರಿಂದ 19 ನೇ ಶತಮಾನದ ಅವಧಿಯಲ್ಲಿ ತತ್ವಪದ ಸಾಹಿತ್ಯ ಚಳುವಳಿ ನಡೆಯಿತು. ತತ್ವಪದಕಾರರು ರಚಿಸಿದ ರಚನೆಗಳಿಗೆ ತತ್ವಪದ ಸಾಹಿತ್ಯ, ಅನುಭಾವ ಸಾಹಿತ್ಯ, ಕೈವಲ್ಯ ಸಾಹಿತ್ಯ ಎಂದು ಕರೆಯಲಾಗಿದೆ. ತತ್ವಪದವು ಅನುಭವದಿಂದ ಕೂಡಿದ್ದು, ಲೌಕಿಕ ಮತ್ತು ಅಲೌಕಿಕ ಬದುಕನ್ನು ಅರ್ಥೈಸುವಂತಹ ಅಭಿವ್ಯಕ್ತಿಯಾಗಿದೆ. ಗುರುಭಕ್ತಿ, ಸದಾಚಾರ, ನೈತಿಕತೆ, ಜಾತ್ಯಾತೀತತೆ, ಭಾವೈಕ್ಯತೆ, ವಸಾಹತುಶಾಹಿಯಂತಹ ವಿಚಾರಗಳನ್ನು ಕುರಿತು ಇವರು ವಿವೇಚಿಸಿದ್ದಾರೆ. ವಚನಕಾರರು ವ್ಯಕ್ತಿಯ ಅಸ್ತಿತ್ವವನ್ನು ಜ್ಞಾನದಲ್ಲಿ, ದಾಸರು ದೈವ ಭಕ್ತಿಯಲ್ಲಿ ಕಂಡರೆ ತತ್ವಪದಕಾರರು ವೈರಾಗ್ಯ ಮತ್ತು ಗುರು ಭಕ್ತಿಯಲ್ಲಿ ಕಂಡಿದ್ದಾರೆ.

ಒಂದು ಪ್ರದೇಶದ ವೈಶಿಷ್ಟತೆ ಆ ಪ್ರದೇಶದ ಸಾಂಸ್ಕೃತಿಕ ಮತ್ತು ಭೌಗೋಳಿಕ ಸಂಗತಿಗಳನ್ನು ಅವಲಂಬಿಸಿರುತ್ತದೆ ಎಂದರೆ ತಪ್ಪಾಗಲಾರದು. 18-19ನೇ ಶತಮಾನದ ಸಾಮಾಜಿಕ ಸಂದರ್ಭದಿಂದ, ಅಧಿಕಾರಶಾಹಿಯ ಆಳ್ವಿಕೆಯಿಂದ, ವಸಾಹತುಶಾಹಿಯ ಮೌಲ್ಯಗಳ ಸ್ವೀಕರಣ-ನಿರಾಕರಣದ ಪರಿಸ್ಥಿತಿಯಿಂದ ಹಾಗೂ ಮತೀಯ ಸಂಘರ್ಷದಿಂದ ಉಂಟಾದ ಪರಿಣಾಮಗಳನ್ನು ಕಣ್ಣಾರೆ ಕಂಡ ಅನುಭಾವಿಗಳು ಸಾಮಾಜಿಕ ಕಾಳಜಿಯನ್ನು ವ್ಯಕ್ತಪಡಿಸಿದ್ದಾರೆ. ತತ್ವಪದಕಾರರದ್ದು ಪ್ರಜಾಪ್ರಭುತ್ವದ ಪ್ರಮುಖ ಆಶಯವನ್ನು ಬದುಕಿಗೆ ಅಳವಡಿಸಿಕೊಂಡಿರುವ ಪರಂಪರೆ ಹಾಗೂ ಸಮಾನತೆ, ಬಹುತ್ವ, ಸಾಮರಸ್ಯಗಳನ್ನು ಬದುಕಿನ ಭಾಗವಾಗಿಸಿಕೊಂಡಿರುವ ಪರಂಪರೆಯಾಗಿದೆ. ಸರ್ವಸಮಾನತೆ ತತ್ವಪದಗಳ ಕೇಂದ್ರ ಆಶಯವಾಗಿದ್ದು, ಸಾಮಾನ್ಯವಾಗಿ ಅವೈದಿಕ ಚಿಂತನೆಗಳನ್ನು ಒಳಗೊಂಡಿವೆ.

ಕರ್ನಾಟಕದ ನೆಲದಲ್ಲಿ 400ಕ್ಕೂ ಹೆಚ್ಚು ತತ್ವಪದಕಾರರನ್ನು ಗುರುತಿಸಬಹುದು. ತಾತ್ವಿಕತೆಯಾಗಿ, ಜೀವನ ವಿಧಾನವಾಗಿ, ಸಾಂಸ್ಕೃತಿಕ ಮತ್ತು ಸಾಹಿತ್ಯಿಕ ಅಭಿವ್ಯಕ್ತಿಯಾಗಿ ಅವು ನಮ್ಮ ನಡುವೆ ಇವೆ. ಈ ಲೇಖನದಲ್ಲಿ ತುಮಕೂರು ಪರಿಸರದ ವ್ಯಾಪ್ತಿಗೆ ಬರುವ ಕೆಲವು ತತ್ವಪದಕಾರರುಗಳಾದ ಕಲ್ಲೂರು ರುದ್ರಮುನಿದೇವ, ಮಲ್ಲೇನಹಳ್ಳಿ ಚನ್ನಬಸವಯ್ಯ, ಹಾಗಲ್ವಾಡಿಯ ಮುದ್ವೀರಸ್ವಾಮಿ, ಹೊನ್ನೇನಹಳ್ಳಿ ದಾಸಗಿರಿಯಪ್ಪ, ಹೊನ್ನಡಿಕೆಯ ಗಂಗಾಧರಸ್ವಾಮಿ, ಶಂಕರಾದೇವ, ಕೆಸ್ತೂರದೇವ, ವಿರಕ್ತ ತೋಂಟದಾರ್ಯ, ಚುಂಗನಹಳ್ಳಿ ಶಿವಪ್ಪ, ಕಲ್ಲೂರಿನ ಲಿಂಗಣ್ಣೊಡೆಯ, ನೊಣವಿನಕೆರೆ ಸೋಮೇಕಟ್ಟೆ ಕರಿವೃಷಬೇಂದ್ರಸ್ವಾಮಿ, ಸೋಮೇಕಟ್ಟೆ ಚೆನ್ನವೀರಸ್ವಾಮಿಗಳು, ಕಂದಿಕೆರೆ ಶಾಂತಪ್ಪ, ಮಲ್ಲಿಕಾರ್ಜುನ ಶಿವಾನಂದ ಹಾಗೂ ನಿಡಗಲ್ಲು ಚೆನ್ನಪ್ಪರ ಸ್ಥೂಲ ಪರಿಚಯವನ್ನು ಮಾಡಲಾಗಿರುತ್ತದೆ.

- **ಕಲ್ಲೂರಿನ ರುದ್ರಮುನಿದೇವ**

ಕಲ್ಲೂರಿನ ರುದ್ರಮುನಿ ಸ್ವಾಮಿಗಳು ಉತ್ತರ ಕರ್ನಾಟಕದಿಂದ ಬಂದ ಸಂತರು. ತುರುವೇಕೆರೆಯ ಕಲ್ಲೂರಿಗೆ ಬಂದು ನೆಲೆಸಿ, ಅಲ್ಲಿಯೇ ಸಮಾಧಿ ಹೊಂದಿದ ಶ್ರೀ ರುದ್ರಮುನಿ ಅವರು ರಚಿಸಿದ ಸ್ತೋತ್ರಗಳು, ಅಂಬಾ ಸ್ತುತಿಗಳನ್ನು ಸಾಧಕರು ಹಾಡುತ್ತಾರೆ. ಅವಧೂತ ಸಂಪ್ರದಾಯದ ರುದ್ರಮುನಿಸ್ವಾಮಿಗಳು ನೇಕಾರ ಕುಲದವರು. ತಮ್ಮ ಕುಲದೇವತೆ ಬನಶಂಕರಿಯ ಉಪಸಕರಾದ ಅವರು ರಚಿಸಿದ ಬಾದಾಮಿಯ ಬನಶಂಕರಿ, ಮಾಗಡಿ ರಂಗ, ತರೀಕೆರೆಯ ಹನುಮ ಮುಂತಾದ ದೇವರ ಮಂಗಳಾರತಿಗಳನ್ನು ವಿಶೇಷವಾಗಿ ಹಾಡುತ್ತಾರೆ. ಅವರ ತತ್ವಪದಗಳನ್ನು ಗಮನಿಸಿದರೆ ಅವರಿಗೆ ಶೈವ, ವೈಷ್ಣವ ಮತ್ತು ಶಾಕ್ತಪಂಥಗಳಲ್ಲಿ ಯಾವ ಭೇದವು ಇಲ್ಲ. ಅವರದ್ದು ಅವಧೂತ ಸಂಪ್ರದಾಯದ ಸಾಧನೆ ಎಂದು ತಿಳಿಯುತ್ತದೆ. ತತ್ವ ಸಾಧಕರು ಹಾಡುವ ಸಂದರ್ಭದಲ್ಲಿ ದೊರಕಿದ ಮತ್ತು ಹಸ್ತಪ್ರತಿಯೊಂದರಲ್ಲಿ ದೊರಕಿದ ಕೆಲವು ಪದಗಳು ಮಾತ್ರ ಲಭ್ಯವಿವೆ.

- **ಚುಂಗನಹಳ್ಳಿ ಶಿವಪ್ಪ:**

ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲೂಕಿನ ಚುಂಗನಹಳ್ಳಿಯವರಾದ ಶಿವಪ್ಪ ಅವಧೂತ ಸಂಪ್ರದಾಯದ ತತ್ವಪದಕಾರ. ಸಿದ್ಧರಾಮ, ಶಿವಸಿದ್ಧರಾಮ, ಸಿದ್ಧಲಿಂಗೇಶ, ಚುಂಗನಪುರದ ಮಲ್ಲಿಕಾರ್ಜುನ, ವಡೆರಹಳ್ಳಿ ಗುರುಶಾಂತ ಮುಂತಾದ ಸ್ಥಳೀಯ ಶರಣರನ್ನು ಮತ್ತು ದೈವ ವಿಶೇಷತೆಯನ್ನು ತಮ್ಮ ತತ್ವಪದಗಳ ಅಂಕಿತಗಳನ್ನಾಗಿಸಿಕೊಂಡಿದ್ದಾರೆ. ಚುಂಗನಹಳ್ಳಿ ಶಿವಪ್ಪನವರ ಗದ್ದುಗೆಯು ಶೆಟ್ಟಿಕೆರೆಯಲ್ಲಿದೆ. ಇವರ ತತ್ವಪದಗಳನ್ನು ಈ ಭಾಗದ ಸಾಧಕರು ಹಾಡುತ್ತಾರೆ. ಅವರ ತತ್ವಪದಗಳನ್ನು ಗಮನಿಸಿದರೆ ಧಾರ್ಮಿಕ ಮತ್ತು ಸಾಮಾಜಿಕ ಸಾಮರಸ್ಯಗಳು ಮುಖ್ಯವಾದ ಆಶಯಗಳಾಗಿ ವ್ಯಕ್ತವಾಗಿವೆ.

- **ಶಂಕರಾನಂದ ಯೋಗಿ**

ದಕ್ಷಿಣ ಕರ್ನಾಟಕದ ಬಹುಪಾಲು ಎಲ್ಲಾ ಜಿಲ್ಲೆಗಳಲ್ಲಿ ಶಂಕರಾನಂದರ ತತ್ವಪದಗಳನ್ನು ಹಾಡುತ್ತಾರೆ. ತುಮಕೂರು, ಚಿತ್ರದುರ್ಗ, ದಾವಣಗೆರೆ, ಮಂಡ್ಯ, ಹಾಸನ, ಮೈಸೂರು ಜಿಲ್ಲೆಗಳ ಎಲ್ಲಾ ಭಾಗಗಳಲ್ಲಿ ಇವರು ಗುರು ಸ್ವರೂಪಿಯಾಗಿ ಕಾಣುತ್ತಾರೆ. ಇವರ ಅಂಕಿತ ಮಹಾಲಿಂಗರಂಗ, ರಂಗ, ಗುರುರಂಗ. ಮಹಾಲಿಂಗರಂಗನ ಕರಸಂಜಾತನೆಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ. ಈತನ ಪ್ರಮುಖ ಕೃತಿಗಳು ಎಂದರೆ ಕೈವಲ್ಯ ನವನೀತ, ಉತ್ತರ ಕೈವಲ್ಯ ನವನೀತ ಮತ್ತು ರಾಮ ಭಕ್ತಿ ಸಾರ. ಇವುಗಳಲ್ಲಿ ಕೈವಲ್ಯ ನವನೀತ ಮತ್ತು ಉತ್ತರ ಕೈವಲ್ಯ ನವನೀತ ಅತ್ಯಂತ ಜನಪ್ರಿಯ ಕೃತಿಗಳಾಗಿದ್ದು, ಇವುಗಳ ಅನೇಕ ಹಸ್ತಪ್ರತಿಗಳು ದೊರೆಕಿವೆ. ಈತನ ಕಾಲ 1833-1913. ತನ್ನನ್ನು ವಸಿಷ್ಠ, ಪರಶರ, ವ್ಯಾಸ, ಶುಕ, ಗೌಡಪಾದ, ಗೋವಿಂದ ಭವತ್ಪಾದರ ಪರಂಪರೆಯವನೆಂದು ಗುರುತಿಸಿಕೊಳ್ಳುತ್ತಾನೆ.

ಕೈವಲ್ಯ ನವನೀತಕ್ಕೆ ತತ್ವಪದ ಪರಂಪರೆಯಲ್ಲಿ ಒಂದು ವಿಶಿಷ್ಟ ಸ್ಥಾನವಿದೆ. ಈ ಪರಂಪರೆಯ ಪ್ರಮುಖ ನಿಲುವುಗಳೆಂದರೆ ಗುರು ಪಾರಮ್ಯ, ವರುಣಾಶ್ರಮ ನಿರಾಕರಣೆ, ಶಬ್ದ ಪ್ರಮಾಣದ ನಿರಾಕರಣೆ, ಉದಾರವಾದ ಅದ್ವೈತಿ ನಿಲುವು, ಲೋಕದ ಎಲ್ಲಾ ಜೀವಿಗಳಿಗೂ ಮುಕ್ತಿಯ ಅವಕಾಶ, ನಡೆ-ನುಡಿ ಸಿದ್ಧಾಂತ ಮತ್ತು ಸಾಧನೆಯ ಮಾರ್ಗದಲ್ಲಿ ಭಕ್ತಿ, ವೈರಾಗ್ಯ, ತಾರಕ ಮತ್ತು ಸಾಂಖ್ಯದ ವಿವಿಧ ಹಂತದ ನಡೆಗಳಿವೆ. ಇವರ ತತ್ವಪದಗಳು ತಮ್ಮ ಕಾವ್ಯನಾತ್ಮಕ ಗುಣ ಮತ್ತು ಗಂಭೀರವಾದ ತತ್ವ ಚಿಂತನೆಯಿಂದ ಅತ್ಯಂತ ಹೆಚ್ಚು ಜನಪ್ರಿಯವಾಗಿವೆ.

ಕೈವಲ್ಯ ಸಾಹಿತ್ಯವೆಂದು ಕರೆಯಲ್ಪಡುವ ತತ್ವಪದಗಳು ಲೋಕ ಕಲ್ಯಾಣವನ್ನು ಮತ್ತು ವ್ಯಕ್ತಿ ಕಲ್ಯಾಣವನ್ನು ಭಿನ್ನ-ಭಿನ್ನವೆಂದು ಭಾವಿಸುವುದಿಲ್ಲ.

ಶ್ರಮಣಧಾರೆಯ ಪ್ರಧಾನ ಆಶಯಗಳಾದ ಲೋಕ ಸಾಮರಸ್ಯ, ಜಾತಿ ನಿರಾಕರಣೆ, ಗುರು ಪಾರಮ್ಯ, ಶಬ್ದ ಪ್ರಮಾಣ ನಿರಾಕರಣೆ ಮುಂತಾದವುಗಳು ಅವರ ತಾತ್ವಿಕ ನಿಲುವುಗಳಾಗಿವೆ.

- **ಶಂಕರಾರ್ಯರು**

ಶಂಕರಾರ್ಯರಿಂದ ಸಾಧಕ ವಲಯದಲ್ಲಿ ಗುರುತಿಸಲ್ಪಡುವ ವೇದಾಂತ ಶಿವರಾಮಶಾಸ್ತ್ರಿಗಳು ರಚಿಸಿದ 'ಶಂಕರಾನಂದ ತತ್ವ ಮತ್ತು ಶಂಕರನಂದ ಪದ್ಧತಿ' ಎಂಬ ಕೃತಿಗಳಲ್ಲಿನ ಅನೇಕ ತ್ವಪದಗಳನ್ನು ಬಯಲು ಸೀಮೆಯ ತತ್ವ ಸಾಧಕರು ತಮ್ಮ ಸಾಧನೆಯ ಮಾರ್ಗವನ್ನಾಗಿಸಿಕೊಂಡಿದ್ದಾರೆ. ಈ ತತ್ವಪದಗಳ ಹತ್ತಾರು ಹಸ್ತಪ್ರತಿಗಳು ಲಭ್ಯವಾಗಿವೆ. ಶಂಕರ, ಗುರು ಶಂಕರ, ಶಂಕರಾರ್ಯ ಅಂಕಿತಗಳುಳ್ಳ ಈ ತತ್ವಪದಗಳು ಅದ್ವೈತ ಪರಂಪರೆಯ ತಾತ್ವಿಕತೆಯನ್ನು ತನ್ಮೂಲಕ ಲೋಕ ಸಾಮರಸ್ಯದ ಸಾಧನೆಯನ್ನು ಮುಂದಿಡುತ್ತವೆ. ಶಂಕರಾರ್ಯರ ತತ್ವಪದಗಳಲ್ಲದೆ ಅಮನಸ್ಕ ರಾಜಯೋಗಾನಂದ ಭೋಧೆ, ಪ್ರಮಾಣ ಸಾಗರ, ಶಂಕರಾನಂದ ಕಂದ, ಬ್ರಹ್ಮಾನಂದ ಬೋಧೆ, ಶಂಕರ ಬೋಧಾಮೃತ, ವೇದಾಂತ ಜ್ಞಾನ, ರತ್ನಾ ಪ್ರಭಾ ಮುಂತಾದ ಕೃತಿಗಳನ್ನು ರಚಿಸಿದ್ದಾರೆ.

ಈ ಚಿಂತನ ಸ್ಥಾನವು ಎಲ್ಲಾ ಕೆಳಸ್ತರದ ಸಮೂಹಗಳಲ್ಲಿ ಪ್ರೀತಿಯನ್ನು ಗಳಿಸಲು ಅನೇಕ ಕಾರಣಗಳಿವೆ. ಮೊದಲನೆಯದಾಗಿ ವರ್ಣವ್ಯವಸ್ಥೆಯ ನಿರಾಕರಣೆ, ಪ್ರಮಾಣಗಳ ನಿರಾಕರಣೆ ಮತ್ತು ಎಲ್ಲಾ ರೀತಿಯ ಧಾರ್ಮಿಕ ಮತ್ತು ಸಾಮಾಜಿಕ ತಾರತಮ್ಯವನ್ನು ನಿರಾಕರಿಸುವ ಹಕ್ಕನ್ನು ನೀಡಿತು. ಎರಡನೆಯದಾಗಿ ಇದು ಕೇವಲ ವಾಗದ್ವೈತವಾಗದೆ ನಿತ್ಯ ಬದುಕಿನಲ್ಲಿ ಅನ್ವಯಗೊಳ್ಳುವ ಕ್ರಿಯಾದ್ವೈತವಾಗಿ ಚಾಲ್ತಿಗೆ ಬಂದಿತು. ಮೂರನೆಯದಾಗಿ ಈ ಪ್ರಸ್ತಾನದ ತತ್ವಪದಗಳು ನೇರವಾಗಿ ಸಾಧಕರ ಅಂತರಂಗದೊಡನೆ ಮಾತಾಡಬಲ್ಲ ಕಾವ್ಯಾತ್ಮಕ ಗುಣ, ತಾತ್ವಿಕ ಸ್ಪಷ್ಟತೆ ಮತ್ತು ಸಂಗೀತದ ಮಾಧುರ್ಯವನ್ನು ಒಳಗೊಂಡಿದೆ. ಹಾಗಾಗಿ ಇಡೀ ಬಯಲು ಸೀಮೆ ಮತ್ತು ಅದರಾಚೆಗೂ ಈ ತತ್ವ ಪ್ರಸ್ಥಾನವು ತನ್ನ ಪ್ರಭಾವವನ್ನು ಉಳಿಸಿಕೊಂಡಿದೆ.

- **ದೇವರಾಯಪಟ್ಟಣದ ಶಂಕರದೇವ ಕಾಲ ಸು.1850**

ಎಡೆಯೂರು ಶ್ರೀ ತೋಂಟದ ಸಿದ್ಧಲಿಂಗಯತಿಗಳ ಕಿರಿಯ ಸಮಕಾಲೀನ. ಶ್ರೀ ಸಿದ್ದಗಂಗಾ ಕ್ಷೇತ್ರದ ಸನಿಹದಲ್ಲಿ ಇರುವ ದೇವರಾಯಪಟ್ಟಣದ ನಿವಾಸಿ. ಹರಿಹರನ ನಂತರ ಶರಣರ ಜೀವನವನ್ನು ರಗಳೆ ರೂಪದಲ್ಲಿ ಬರೆದ ಅಪರೂಪದ ವಿದ್ವಾಂಸ. ರಗಳೆ, ಶತಕ, ಕಂದ, ದಂಡಕ, ಸ್ತೋತ್ರರೂಪದ ಅನೇಕ ಕೃತಿಗಳನ್ನು ರಚಿಸಿದ್ದಾನೆ. ಶಂಕರ ದೇವನ ರಗಳೆಗಳನ್ನು ಹೀಗೆ ವಿಭಾಗಿಸಬಹುದು.

ಶರಣರಿಗೆ ಸಂಬಂಧಿಸಿದ ರಗಳೆ

ಅಮುಗಿ ದೇವಯ್ಯನ ರಗಳೆ, ಆಯ್ದಕ್ಕಿ ಮಾರಯ್ಯನ ರಗಳೆ, ಎಲೇಶ್ವರದ ಕೇತಯ್ಯನ ರಗಳೆ, ಕಮಲವ್ವೆ ರಗಳೆ, ಕಲಿಗಣನಾಥನ ರಗಳೆ, ಗುರುಭಕ್ತನ ರಗಳೆ, ಚೇರಮ ರಗಳೆ, ಧೂಪದ ಮಂಚಿತಂದೆ ರಗಳೆ, ಬಹುರೂಪಿ ಚೌಡಯ್ಯ ರಗಳೆ, ಬಿಬ್ಬಿ ಚಾಚಯ್ಯ ರಗಳೆ, ಮೇದಾರ ಕೇತಯ್ಯ ರಗಳೆ, ಮೈದುನ ರಾಮಯ್ಯನ ರಗಳೆ, ಸಕಲೇಶ ಮಾದರಸನ ರಗಳೆ.

ಅಷ್ಟಾವರಣಕ್ಕೆ ಸಂಬಂಧಿಸಿದ ರಗಳೆ: ಪ್ರಸಾದ ರಗಳೆ, ಜಂಗಮ ದಾಸೋಹ ರಗಳೆ

ಸಂಕೀರ್ಣ ರಗಳೆಗಳು: ಪುನರ್ ದೀಕ್ಷೆ ರಗಳೆ, ಮನೋವಿಕಾರ ನಿರಸನ ರಗಳೆ, ವೀರಶೈವ ರಗಳೆ, ವೀರಶೈವ ಆರಾಧ್ಯ ರಗಳೆ, ಶಂಕರ ಗದ್ಯ ರಗಳೆ

ವೃತ್ತ ರೂಪದಲ್ಲಿ ಶತಕಗಳು ಮತ್ತು ಅಷ್ಟಕ: ಗುರು ಶಂಕರೇಶ್ವರ ಶತಕ, ಶಂಕರ ಶತಕ, ಶಂಕರೇಶ್ವರ ಶತಕ, ಪುಷ್ಪಾಷ್ಟಕ

ದಂಡಕ: ನಿಜಲಿಂಗ ಚಿಕ್ಕಯ್ಯನ ದಂಡಕ

ವಾರ್ದಕ ಷಟ್ಪದಿ: ಇಷ್ಟಲಿಂಗ ಚಾರಿತ್ರ: ಶಿವಪೂಜೆ ಸ್ತೋತ್ರ (ಈ ಕೃತಿಯನ್ನು ದಾವಣಗೆರೆಯ ಎಸ್. ಉಮಾಪತಿ ಅವರು ಸಂಪಾದಿಸಿ ಪ್ರಕಟಿಸಿದ್ದಾರೆ).

ತುಮಕೂರು ನಗರದ ಉತ್ತರ ಹೊರ ವಲಯದ ಶಿರಾ ಗೇಟ್ ಬಳಿಯ ಕೆರೆಯ ಒಳ ಪ್ರದೇಶದಲ್ಲಿ ಇರುವ ಶಿಲಾ ಶಾಸನವನ್ನು ಈ ಹಿಂದೆ ಚಿತ್ರದುರ್ಗದ ಶಾಸನತಜ್ಞ.ಡಾ.ಬಿ.ರಾಜಶೇಖರಪ್ಪನವರು ಓದಿದ್ದು ಅದರಲ್ಲಿ 'ಗುಜರಾತಿ ಶಾಂತದೇವರಿಗೆ' ಮಹಾಮತಿಗೆ ಕೊಟ್ಟ ಶಾಂತಪುರದ ಉಲ್ಲೇಖವಿದೆ. ಅಮೃತಪುರ ಪರದಳ, ಭಯಂಕರ ತುರುಕದಳ, ನೀಭಾಡ ತಿಮ್ಮಣ್ಣ ನಾಯಕರ ಕುಮಾರ ಕೆಂಚ ಸೋಮಣ್ಣ ನಾಯಕರು ಕೊಟ್ಟಿದ್ದು ಎಂಬ ಉಲ್ಲೇಖವಿದೆ.

ಶಂಕರದೇವರ ತತ್ವಪದದಲ್ಲಿ ತುಮಕೂರು ಸನಿಹ ಇರುವ ಸತ್ಯಮಂಗಲದ ಉಲ್ಲೇಖವಿದೆ. ಸತ್ಯಮಂಗಲದ ನಂತರ ಶಾಂತಿಗ್ರಾಮದ ಹೆಸರಿದೆ. ಈ ಶಾಸನದಲ್ಲಿ ಉಲ್ಲೇಖಗೊಂಡಿರುವ ಶಾಂತಪುರವೇ ಶಾಂತಿಗ್ರಾಮ. ಶಂಕರದೇವರ ಕಂದವನ್ನು ಇಬ್ಬರು ಪ್ರಾಚೀನ ಸಂಪಾದನೆ ಪರಂಪರೆಯವರು ಸಂಕಲನ ಮಾಡಿದ್ದಾರೆ. ಸಂಪಾದನೆ ಚೆನ್ನಂಜೆ ದೇವರು ಸೇರಿಸಿದ ಶಂಕರ ದೇವರ ಕಂದ. ಈ ಕೃತಿಯನ್ನು ಪ್ರೊ. ಸಿ. ಮಹಾದೇವಪ್ಪನವರು ಸಂಪಾದಿಸಿ ಪ್ರಕಟಿಸಿದ್ದಾರೆ. ಸಂಪಾದನೆ ಸಿದ್ಧವೀರನ್ನೊಡೆಯ ದೇವರಿಂದ ಸಂಕಲಿತವಾದ ಶಂಕರದೇವರು ನಿರೂಪಿಸಿದ ಕಂದ ಈ ಕೃತಿಯನ್ನು ಆಸ್ಥಾನ ವಿದ್ವಾನ್ ಎನ್. ಆರ್. ಕರಿಬಸವ ಶಾಸ್ತ್ರಿಗಳು ಸಂಪಾದಿಸಿ ಪ್ರಕಟಿಸಿದ್ದಾರೆ.

- **ಹೊನ್ನ ಕವಿ (1640–1730)**

ಹೊನ್ನಕವಿಯ ತತ್ವಪದಗಳ ಅಂಕಿತ ಗಂಗೇಶ, ಗಂಗೇಶಾ, ಶಿವ ಗಂಗಾಧರ, ಗಂಗಾಧರ, ಕಾಕ್ಕೊದ್ದಿಗಿರಿಯ ಗಂಗೇಶ ಈ ಅಂಕಿತಗಳನ್ನು ಹೊನ್ನಕವಿಯು ತಮ್ಮ ತತ್ವಪದಗಳಲ್ಲಿ ಬಳಸಿದ್ದಾರೆ. ಇವೆಲ್ಲವೂ ಶಿವಗಂಗೆ ಗಂಗಾಧರೇಶ್ವರನಿಗೆ ಅನ್ವಯಿಸುವ ಹೆಸರುಗಳು. ಈ ತತ್ವಪದಗಳನ್ನು ಮೊದಲು ಗುರುತಿಸಿ ಸಂಪಾದಿಸಿದವರು ಮೈಸೂರಿನ ಜಿ. ಎ. ಶಿವಲಿಂಗಯ್ಯನವರು. ಹೊನ್ನಕವಿಯ ಅಪ್ರಕಟಿತ ತತ್ವಪದವನ್ನು ಸಂಪಾದಿಸಿದ ಡಾ. ಬಿ. ನಂಜುಂಡಸ್ವಾಮಿ ಅವರು 'ಬಸವ ಪಥ' ಸಂಪುಟ 18, ಸಂಚಿಕೆ 1, ಏಪ್ರಿಲ್ 1996ರಲ್ಲಿ ಪ್ರಕಟಿಸಿದ್ದಾರೆ. ಈ ತತ್ವಪದಗಳ ಜೊತೆಗೆ 'ಗೌಡ ಕುಲವಿಭೂಷಣ ಕೆಂಪೇಗೌಡನ ಜಯಪ್ರಶಸ್ತಿ' ಕರ್ತೃ ಗಂಗೇಶ ಅಂಕಿತದ ಕವಿ ಎಂದು ಬೆಂಗಳೂರು ಸರ್ವಭೂಷಣ ಮಠದ ವತಿಯಿಂದ ಪ್ರಕಟವಾದ 'ಸರ್ವಭೂಷಣ ಶ್ರೀ' ಕೃತಿಯಲ್ಲಿ ಲೇಖನ ಪ್ರಕಟವಾಗಿತ್ತು.

ಗೌಡ ಕುಲವಿಭೂಷಣ ಕೆಂಪೇಗೌಡನ ಜಯಪ್ರಶಸ್ತಿ ಕರ್ತೃ ಹೊನ್ನಕವಿ ಎಂದು ಲೇಖನ ಪ್ರಕಟವಾದ ನಂತರ ಈ ಹಿಂದೆ ಮೈಸೂರಿನ ಜಿ. ಎ. ಶಿವಲಿಂಗಯ್ಯನವರು ಬಸವಪಥ ಸಂಪುಟ 3, ಸಂಚಿಕೆ 5(1981) ರಲ್ಲಿ ಸಂಪಾದಿಸಿ ಪ್ರಕಟಿಸಿದ್ದ ಅಲ್ಲಮಪ್ರಭು ಸಂಗೀತ ಪದ ಕರ್ತೃ ಸಹ ಹೊನ್ನಕವಿಯೇ ಎಂದು ತಿಳಿದು ಬಂದಿದೆ. ಜೊತೆಗೆ ಕವಿಚರಿತೆಕಾರರು ನೋಡಿದ್ದ 'ಇಮ್ಮಡಿ ತಮ್ಮರಾಯ ಗೌಡನ ಪದಗಳು' ಕರ್ತೃ ಸಹ ಹೊನ್ನಕವಿಯೇ. ಈ ಹಿಂದೆ ಎಸ್. ಶಿವಣ್ಣನವರಿಂದ ಸಂಪಾದನೆಗೊಂಡು ಶಿವಗಂಗೆ ಮೇಲಣ ಗವಿ ಸಂಸ್ಥಾನ ಮಠದಿಂದ ಪ್ರಕಟವಾದ 'ಶಿವಗಂಗಾ ಸಿರಿ' (2000) ಸ್ಮರಣ ಸಂಪುಟದಲ್ಲಿ ಪ್ರಕಟವಾದ ಗಂಗಾಧರ ಶತಕ ಸಹ ಹೊನ್ನಕವಿಯದ್ದೆ ಎಂದು ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ. ಅವರ ಸ್ವರವಚನಗಳ ಭಾವಕ್ಕೂ ಅನೇಕ ಅಂಶಗಳು ಹೊಂದಿಕೊಳ್ಳುತ್ತವೆ.

ಹೊನ್ನಕವಿಯು ರಚಿಸಿದ ಇಮ್ಮಡಿ ತಮ್ಮರಾಯ ಕೆಂಪರಾಯರ ಪದಗಳು ಹಸ್ತಪ್ರತಿ ಮದ್ರಾಸ್ ವಿಶ್ವವಿದ್ಯಾಲಯದಿಂದ ಬಂದಿದ್ದು, ಯಾವ

ವಿಶ್ವವಿದ್ಯಾಲಯದ ಸಂಗ್ರಹದಲ್ಲಿ ಇದೆ ಎಂಬ ಮಾಹಿತಿ ಇಲ್ಲ. ಐತಿಹಾಸಿಕ ಮಹತ್ವ ಇರುವ ಈ ಹಸ್ತಪ್ರತಿ ಲಭ್ಯವಾದರೆ ಯಲಹಂಕ ನಾಡಿನ ಗೌಡ ದೊರೆಗಳ ಬಗ್ಗೆ ವಿಶೇಷವಾಗಿ ಇಮ್ಮಡಿ ಕೆಂಪೇಗೌಡರ ಬಗ್ಗೆ ಮಾಹಿತಿ ಲಭ್ಯವಾಗುತ್ತದೆ. ಹೊನ್ನಕವಿಯು ವೇದ, ಉಪನಿಷತ್ತು, ಆಗಮ, ಪುರಾಣ, ವಚನ ಸಾಹಿತ್ಯವನ್ನು ಬಹಳ ಸೂಕ್ಷ್ಮವಾಗಿ ಅಧ್ಯಯನ ಮಾಡಿದ್ದಾರೆ. ರಾಮಾಯಣ, ಮಹಾಭಾರತ, ಶಿವಪುರಾಣದ ಕಥೆಗಳನ್ನು ಒಂದೊಂದೇ ಸಾಲಿನಲ್ಲಿ ಸೂಕ್ಷ್ಮವಾಗಿ ತಿಳಿಸಿಕೊಟ್ಟಿದ್ದಾರೆ. ಈ ತತ್ವಪದ ಅಧ್ಯಯನ ಯುವ ವಿದ್ವಾಂಸರಿಗೆ ಒಂದು ಸವಾಲೇ ಸರಿ. ಪೂರ್ವಾರ್ಜಿತಂಗಳನ್ನು ಮೀರಿ ಬಾಳುವರಾರು ಎಂದು ಪ್ರಾರಂಭವಾಗುವ ಈ ತತ್ವಪದ ಹನ್ನೆರಡು ನುಡಿ ಇದ್ದು, ಹನ್ನೆರಡರ ನುಡಿಯಲ್ಲಿ ಕವಿ ಹೆಸರು ಚರಣ ಸೇವಕ ಹೊನ್ನನು ಎಂದು ಬರುತ್ತದೆ.

- **ನೊಣವಿನಕೆರೆ ಸೋಮೇಕಟ್ಟೆ ಕರಿವೃಷಭೇಂದ್ರ ಸ್ವಾಮಿಗಳು**

ಗದಗ ಜಿಲ್ಲೆ ಡಂಬಳ ಸಂಸ್ಥಾನ ಮಠದ ಚರ ಪಟ್ಟಾಧ್ಯಕ್ಷರಾದ ಪರಮಪೂಜ್ಯ ಚೀಲಾಳ ಪರಂಪರೆ ಸ್ವಾಮಿಗಳು ಬಂದು ತುಮಕೂರಿನ ಪೂರ್ವ ಭಾಗದಲ್ಲಿ ನೆಲೆಸಿದರು. ಇಲ್ಲಿ ಶಿವಾಲಯವಿದ್ದು ಅದನ್ನು ಭಕ್ತಜನತೆ ಸೋಮೇಶ್ವರ ಎಂದು ಕರೆಯುತ್ತಾ ಇದ್ದರು. ಆ ದೇವಾಲಯದ ಸನಿಹ ಒಂದು ಕಟ್ಟೆ ಇತ್ತು. ಆ ಕಟ್ಟೆಯನ್ನು ಸೋಮೇಶ್ವರ ಕಟ್ಟೆಯೆಂದು ಕರೆಯಲಾಗುತ್ತಿತ್ತು. ಆ ಕಟ್ಟೆಯ ಕನ್ನಡದಲ್ಲಿ ಒಂದು ಮಠವನ್ನು ಕಟ್ಟಲಾಯಿತು. ಅದೇ ಸೋಮೇಕಟ್ಟೆ ಮಠ. ಈ ಮಠ ಪರಂಪರೆಯ ಸೂತ್ರಾನುವರ್ತಿಗಳಾದ ಸಿದ್ದೇಶ್ವರಸ್ವಾಮಿಗಳು ಕಡು ವೈರಾಗ್ಯದಿಂದ ನಿಸ್ಸಂಗ, ನಿರಗೋಷ್ಠಿಗಳನ್ನು ಬಯಸಿ ತಿಪಟೂರು ತಾಲೂಕು ವನಾಂತರದಲ್ಲಿ ವೃಕ್ಷ ಮೂಲವನ್ನಾಶ್ರಯಿಸಿ ತಪಸ್ಸು ಮಾಡುತ್ತಾ ಅಂತರ್ಮುಖಿಗಳಾಗಿರುವಲ್ಲಿ ಹಾಗಲವಾಡಿ ಮುದಿಯಪ್ಪ ನಾಯಕನ ಬೇಟೆಗೆ ಬಂದು ಕರಡಿ ಎಂದು ಭಾವಿಸಿ ಗುಂಡೇಟನ್ನು ಹೊಡೆಯಲು ಇದನ್ನು ಸಹಿಸಿಕೊಂಡು ಶಿವಧ್ಯಾನದಲ್ಲಿಯೇ ತಲ್ಲೀನರಾಗಿದ್ದರು. ಇದನ್ನು ನೋಡಿದ ಮುದಿಯಪ್ಪನಾಯಕರು ಅವರಲ್ಲಿ ಶರಣಾಗತರಾದರು. ಆ ಸ್ವಾಮಿಗಳಿಂದ ಲಿಂಗಂಗ ಸಾಮರಸ್ಯವನ್ನು ತಿಳಿದುಕೊಂಡು ಅವರ ಶಿಷ್ಯರಾಗಿ ಅವರಿಗೆ ಮಠವನ್ನು ಕಟ್ಟಿಸಿಕೊಟ್ಟರು. ಇಂತಹ ಪರಂಪರೆಯ ಸ್ವಾಮಿಗಳಾಗಿ ಬಂದವರು ಹದಿನಾರನೇ ಚರ ಪಟ್ಟಾಧ್ಯಕ್ಷರಾದ ಶ್ರೀ ಮನ್ನಿರನಂಜನ ಗುರುವಾರಣ್ಯರಾದ ಕರಿವೃಷಭ ದೇಶಿ ಕೇಂದ್ರ ಸ್ವಾಮಿಗಳು. ಇವರು ಕ್ರಿ.ಶ. 1808ನೇ ಇಸವಿಯಲ್ಲಿ ಶಿವಗಂಗೆ ಕ್ಷೇತ್ರಕ್ಕೆ ದಕ್ಷಿಣದಲ್ಲಿರುವ ಅದರಂಗಿ ಗ್ರಾಮದಲ್ಲಿ ಜನಿಸಿದರು. ತಂದೆ ಮರುಳಾರಾಧ್ಯ ಮಠ ಪರಂಪರೆಯ ರಾಚಪ್ಪದೇವರು.

ಶ್ರೀ ಕರಿವೃಷಭೇಂದ್ರ ಸ್ವಾಮಿಗಳು ಬಾಲ್ಯದಲ್ಲಿಯೇ ವೈರಾಗ್ಯಶೀಲರಾಗಿ ಶಿವಾನುಭವ ಶಾಸ್ತ್ರವನ್ನು ಅಭ್ಯಾಸ ಮಾಡುತ್ತಾ ನೊಣವಿನಕೆರೆ ಗುರುಮಠಕ್ಕೆ ಬಂದು ಶ್ರೀ ಮನ್ನಿರಾಭಾರಿ ರುದ್ರಸ್ವಾಮಿಗಳ ಶಿಷ್ಯರಾಗಿ ಅವರಿಂದ ಚರಪಟ್ಟವನ್ನು ಅನುಗ್ರಹಿಸಿಕೊಂಡು ತೋಟದಲ್ಲಿ ಯೋಗಶಾಲೆಯನ್ನು ನಿರ್ಮಿಸಿ ಅಲ್ಲಿ ಅನುಷ್ಠಾನ ಮಾಡುತ್ತಾ ಇದ್ದರು. ಪ್ರತಿ ವರ್ಷ ಶ್ರಾವಣ ಮಾಸದಲ್ಲಿ ತಮ್ಮ ಎಲ್ಲಾ ಶಿಷ್ಯರನ್ನು ಬರ ಮಾಡಿಕೊಂಡು ಒಂದು ತಿಂಗಳವರೆಗೆ ಅನುಭವ ಮಂಟಪದಲ್ಲಿ ವಚನ ಶಾಸ್ತ್ರಗಳ, ಶೂನ್ಯ ಸಂಪಾದನೆಯ ಮೊದಲಾದ ಅನೇಕ ಶಿವಾನುಭವ ಗ್ರಂಥಗಳನ್ನು ಪ್ರವಚನ ಮಾಡಿಸಿ ಸಹಜಾರ್ಥವನ್ನು ಅಪ್ಪಣೆ ಕೊಡಿಸುತ್ತಿದ್ದರು. ಇದು ಕಲ್ಯಾಣದ ಪ್ರಥಮ ಗೋಷ್ಠಿಯಂತೆ ಕಂಗೊಳಿಸುತ್ತಿದ್ದಿತು. ಇವರು ತಮ್ಮ ಸೇವೆಯಲ್ಲಿ ಇದ್ದ ಸೇವಾಮರಿ ಅಥವಾ ಮರಿಸ್ವಾಮಿಗಳಿಗೆ ಕರಿಬಸವ ಸ್ವಾಮಿಗಳೆಂಬ ಹೆಸರನ್ನು ಕೊಟ್ಟು ಅನುಗ್ರಹಿಸಿ ಷಟ್‌ಸ್ಥಲದ ಏಕೋತ್ತರ ಶತಸ್ಥಲದ ಮರ್ಮಗಳನ್ನೆಲ್ಲಾ ಭೋಧಿಸಿ ವಿರಕ್ತಿಯ ಚರಪಟ್ಟವನ್ನು ಅನುಗ್ರಹಿಸಿ ಕ್ರಿ.ಶ. 1876 ರಲ್ಲಿ ಮಹಾಲಿಂಗದಲ್ಲಿ ಲೀನವಾದರು. ಇವರ ಗದ್ದುಗೆ ನೊಣವಿನಕೆರೆ ಕಾಡಸಿದ್ದೇಶ್ವರ ಮಠದಲ್ಲಿದೆ. ಇವರು ಬರೆದ ತತ್ವಪದಗಳನ್ನು ಹೊನ್ನುಡಿಕೆ ಹೆಚ್.ಆರ್. ಮಹಾಂತಪ್ಪನವರು ಜಿಲ್ಲಾ ಮತ್ತು ಸಷನ್ಸ್ ನ್ಯಾಯಾಧೀಶರು. ತಾವು ತುಮಕೂರಿನಲ್ಲಿ ನ್ಯಾಯವಾದಿಗಳಾಗಿ ಸೇವೆ ಸಲ್ಲಿಸುತ್ತಾ ಇರುವಾಗಲೇ ಸಂಗ್ರಹಿಸಿ ಸಂಪಾದಿಸಿ ವಿಜಯಪುರದ ಫ.ಗು. ಹಳಕಟ್ಟಿಯವರು ಪ್ರಕಟಿಸುತ್ತಿದ್ದ 'ಶಿವಾನುಭವ'ದಲ್ಲಿ ಪ್ರಕಟ ಮಾಡುತ್ತಾ ಬಂದಿದ್ದರು. 1962 ರಲ್ಲಿ ಧಾರವಾಡದ ಮುರುಘಾಮಠದಿಂದ ಎಚ್. ಆರ್. ಮಹಾಂತಯ್ಯನವರು ಸಂಗ್ರಹಕ ಸಂಪಾದಕರಾಗಿ ಪ್ರಕಟಿಸಿದ್ದಾರೆ.

- **ಗುಬ್ಬಿ ತಾ. ಮಲ್ಲೇನಹಳ್ಳಿ ಚೆನ್ನಬಸವಯ್ಯನವರು**

ನೊಣವಿನಕೆರೆ ಕರಿವೃಷಬೇಂದ್ರ ಸ್ವಾಮಿಗಳ ಶಿಷ್ಯ ವರ್ಗದಲ್ಲಿ ಇದ್ದವರು. ಬಾಲ್ಯದಲ್ಲಿ ಕವಿತಾಶಕ್ತಿ ಇರಲಿಲ್ಲ. ಮೇಲಿಂದ ಮೇಲೆ ಗುರುಗಳ ಸಂಪರ್ಕ, ಪ್ರವಚನ, ಶಿವಾನುಭನುಭವ ಗೋಷ್ಠಿಯಲ್ಲಿ ಪಾಲ್ಗೊಂಡು ತತ್ವಪದವನ್ನು ರಚಿಸುವ ಶಕ್ತಿಯನ್ನು ಪಡೆದುಕೊಂಡರು. ಇವರ ಅಂಕಿತ ಸೋಮೇಕಟ್ಟೆ ಕರಿವೃಷಭ.

- **ಹೊನ್ನುಡಿಕೆಯಲ್ಲಿದ್ದ ಗಂಗಾಧರ ಸ್ವಾಮಿಗಳು**

ಗುಬ್ಬಿ ತಾಲೂಕು ನಿಟ್ಟೂರು ಗ್ರಾಮದಲ್ಲಿ ಪುನೀತರಾದ ಚಿಕ್ಕಣ್ಣನವರು ಭದ್ರಮ್ಮನವರ ಉದರದಲ್ಲಿ ಜನಿಸಿ ಬಾಲ್ಯದಲ್ಲಿಯೇ ಅನೇಕ ವೇದಾಂತ, ಸಿದ್ಧಾಂತ, ಶಿವಾನುಭವ ಶಾಸ್ತ್ರಗಳನ್ನು ಅಭ್ಯಾಸ ಮಾಡಿ ಬಹುಕಾಲ ಗುರುಕುಲದಲ್ಲಿ ವಾಸ ಮಾಡಿ ಸ್ವಲ್ಪ ಕಾಲ ಪ್ರಸಿದ್ಧವಾದ ಶ್ರೀ ಶಂಭುಲಿಂಗನ ಬೆಟ್ಟದಲ್ಲಿ ಪೂರ್ಣಾನುಗ್ರಹವನ್ನೂ ಪಡೆದು ಸಂಸಾರ ಶಿವಯೋಗಿಗಳಾದ (ವಿವಾಹಿತರು) ಇವರು ತುಮಕೂರು ಮತ್ತು ಮೈಸೂರು ಜಿಲ್ಲೆಗಳಲ್ಲಿ ಅನೇಕ ಶಿಷ್ಯರಿಗೆ ಮಹಾಮಂತ್ರವನ್ನು ಉಪದೇಶಿಸಿ ಕ್ರಿ.ಶ 1915 ರಾಕ್ಷಸ ನಾಮ ಸಂವತ್ಸರದಲ್ಲಿ ಪಂಚಭೌತಿಕ ಕಾಯವನ್ನು ಬಿಟ್ಟು ಲಿಂಗೈಕ್ಯರಾದರು. ಇವರ ಸಮಾಧಿ ಮಲ್ಲೇನಹಳ್ಳಿಯಲ್ಲಿ ಇದೆ.

- **ಸೋಮೇಕಟ್ಟೆ ಸ್ತುತಿ ಗೀತೆ**

ಸೋಮೇಕಟ್ಟೆ ಪರಂಪರೆ ಬಹಳ ದೊಡ್ಡದು. ಈಗ ಸಿಕ್ಕಿರುವ ಮಾಹಿತಿಯಂತೆ ಈ ಪರಂಪರೆಯ ಆದ್ಯ ತುಮಕೂರು ಸೋಮೇಕಟ್ಟೆ ಚೆನ್ನವೀರಸ್ವಾಮಿಗಳು ಇವರು ಚಿತ್ರದುರ್ಗದ ಮುರುಘ ಗುರುಸಿದ್ಧಸ್ವಾಮಿಗಳ ಕಿರಿಯ ಸಮಕಾಲೀನರು. ಅವರನ್ನು ಗುರು ಸ್ವರೂಪದಲ್ಲಿ ನೋಡಿದವರು. 1890–1770 ರ ಕಾಲಮಾನದಲ್ಲಿ ಇದ್ದಿರಬಹುದು. ಇಂತಹ ಪರಂಪರೆಯನ್ನು ಮತ್ತೆ ಉಜ್ವಲವಾಗಿ ಬೆಳಗಿದವರು ನೊಣವಿನಕೆರೆ ಕರಿವೃಷಭೇಂದ್ರಸ್ವಾಮಿಗಳು ಮತ್ತು ಅವರ ಶಿಷ್ಯಂದಿರು. ಈ ಪರಿಸರದಲ್ಲಿ ಹಲವು ಜನ ಅನುಭವಿಗಳು ತತ್ವಪದಗಳನ್ನು ರಚಿಸಿದ್ದಾರೆ. ಅವರ ವಿವರಗಳು ಲಭ್ಯವಿಲ್ಲ.

- **ಕೆಸ್ತೂರದೇವ**

ತೋಂಟದ ಸಿದ್ಧಲಿಂಗಯತಿಗಳ ಸಂಪ್ರದಾಯಕ್ಕೆ ಸೇರಿದ ಕೆಸ್ತೂರದೇವರ ವೈಯಕ್ತಿಕ ವಿವರಗಳು ಲಭ್ಯವಿರುವುದಿಲ್ಲ. ಅವರು ತಮ್ಮ ತತ್ವಪದಗಳಲ್ಲಿಯೂ ತಾವು ಬದುಕಿದ್ದ ಕಾಲ, ಊರು, ಮಠಮಾನ್ಯ ಹೀಗೆ ಯಾವುದೇ ವಿವರಗಳನ್ನು ಹೇಳಿಕೊಂಡಿರುವುದಿಲ್ಲ. ಇವರ ಪ್ರತಿಯೊಂದು ಹಾಡಿನ ಕೊನೆಯಲ್ಲಿ ಗುರುಸಿದ್ದಲಿಂಗ ಎನ್ನುವ ಅಂಕಿತ ಇರುವುದರಿಂದ ಇವರು ತೋಂಟದ ಸಿದ್ಧಲಿಂಗಯತಿಗಳ ಸಂಪ್ರದಾಯಕ್ಕೆ ಸೇರಿದವರೆಂಬುದು ತಿಳಿದು ಬರುತ್ತದೆ. ಕೆಸ್ತೂರದೇವರು ವೀರ ವಿರಾಗಿಗಳಾಗಿದ್ದು, ಮಠದ ಸ್ವಾಮಿಯಾಗಿದ್ದಿರಬಹುದು.

- **ಹಾಗಲವಾಡಿ ಮುದ್ವೀರಸ್ವಾಮಿ**

ತುಮಕೂರು ಜಿಲ್ಲೆ ಹಾಗಲವಾಡಿ ಸಂಸ್ಥಾನದ ಪಾಳೇಗಾರರ ಧರ್ಮ ಗುರುಗಳಾಗಿದ್ದ ಮುದ್ವೀರಸ್ವಾಮಿಯವರು ತಮ್ಮ ಜೀವಿತದ ಬಹು ಕಾಲವನ್ನು ಹಾಗಲವಾಡಿಯಲ್ಲಿಯೇ ಕಳೆದವರಾದ್ದರಿಂದ ಇವರಿಗೆ ಹಾಗಲವಾಡಿ ಮುದ್ವೀರಸ್ವಾಮಿ ಎಂದೆ ಹೆಸರಾಯಿತು. ಬಾಲ್ಯದಲ್ಲೇ ಜ್ಞಾನಾರ್ಜನೆಗಾಗಿ ಕಾಶಿಗೆ ಹೋಗಿ ಬಂದಿದ್ದರು ಎಂದು ತಿಳಿದು ಬರುತ್ತದೆ. ವೇದ, ಆಗಮ, ಶಾಸ್ತ್ರ, ಪುರಾಣ, ವೀರಶೈವ ಸಿದ್ಧಾಂತಗಳಲ್ಲಿ ಪ್ರಕಾಂಡ ಪಂಡಿತರಾಗಿದ್ದು, ವೀರಶೈವ ಸಾಧಕರು ಎನಿಸಿಕೊಂಡಿದ್ದರು. ಮುದ್ವೀರ ಸ್ವಾಮಿಯವರು ತನ್ನನ್ನು ಶ್ರೀಮದ್ ವೇದ ಶಿರಹ ಶಿವಾಗಮ ಪ್ರಭೃತಿ ಪ್ರಭೂತ ಪುರಾತನ ಗೀತನವದ್ಯಾ ಪ್ರವೀಣ ಶ್ರೀ

ವೀರಶೈವ ಶಟ್‌ಸ್ಥಲ ಸ್ಥಾಪನಾಚಾರ್ಯವರ್ಯ ಮುದ್ವೀರಯೋಗಿ ಎಂದು ಕರೆದುಕೊಂಡಿದ್ದಾರೆ. ಮುದ್ವೀರಸ್ವಾಮಿ ರಚಿಸಿರುವ ಶಿವ ತತ್ವ ಸುಜ್ಞಾನ ಪ್ರದೀಪಿಕೆ ಮತ್ತು 107 ತತ್ವಪದಗಳು ಲಭ್ಯ ಇವೆ. ಶಿವತತ್ವ ಸುಜ್ಞಾನ ಪ್ರದೀಪಿಕೆಯನ್ನು ಶಿವ ಸುಜ್ಞಾನ ದೀಪಿಕೆ, ಶಿವತತ್ವ ಸುಜ್ಞಾನ ದೀಪಿಕೆ ಎಂಬ ಹೆಸರುಗಳಿಂದಲೂ ವಿದ್ವಾಂಸರು ಗುರುತಿಸುತ್ತಾರೆ. ಮುದ್ವೀರಸ್ವಾಮಿಯು ಮುರಿಗೆ ಶಾಂತವೀರನನ್ನು ತಮ್ಮ ಗುರುವೆಂದು ಕರೆದುಕೊಂಡಿರುವುದರಿಂದ ಇವರೂ ಸಹ ತೋಂಟದ ಸಿದ್ಧಲಿಂಗಯತಿಗಳ ಶಿಷ್ಯ ಪರಂಪರೆಗೆ ಸೇರಿದವರಾಗಿದ್ದಾರೆ.

- **ಸೋಮೆಕಟ್ಟೆ ಚೆನ್ನವೀರಸ್ವಾಮಿಗಳು**

ಸೋಮೆಕಟ್ಟೆ ಚನ್ನವೀರಸ್ವಾಮಿಗಳು ಸಹ ತುಮಕೂರು ಜಿಲ್ಲೆ ತಿಪಟೂರು ತಾಲೂಕು ನೊಣವಿನಕೆರೆಯ ಸೋಮೆಕಟ್ಟೆ ಮಠ ಪರಂಪರೆಗೆ ಸೇರಿದವರು ಹಾಗೂ ವಿರಾಗಿಗಳು ಆಗಿದ್ದರು. ಇವರ ತತ್ವಪದಗಳ ಅಂಕಿತ ಗುರುಚೆನ್ನಬಸವ. ಕರಿವೃಷಭೇಂದ್ರಸ್ವಾಮಿಯು ಸಹ ಈ ಮಠದ ಪರಂಪರೆಗೆ ಸೇರಿದವರಾಗಿದ್ದು, ಕರಿವೃಷಭಲಿಂಗೇಂದ್ರ ಅಂಕಿತದಲ್ಲಿ ತತ್ವಪದಗಳನ್ನು ರಚಿಸುತ್ತಾರೆ. ಚನ್ನವೀರಸ್ವಾಮಿಗಳು ಅಪರಾಧ ಸ್ತೋತ್ರ, ಅಮ್ಮಗಳ ತ್ರಿವದಿ, ಗಣ ತಾರಾವಳಿ, ಗುರು ಕರುಣಾಮೃತ, ಗುರು ಕರುಣ ತ್ರಿವಿಧಿ, ಗುರು ಸ್ತೋತ್ರ, ಶರಣ ಚರಿತೆ, ಹರಿಗಣಂಗಳ ಚರಿತೆ, ಶಿವ ಯೋಗಾನಂದ ತ್ರಿವಿಧಿ ಇವೆ ಮೊದಲಾದ 24 ಕೃತಿಗಳನ್ನು ರಚಿಸಿದ್ದು, ಇವುಗಳನ್ನು ಹೊನ್ನವಳ್ಳಿ ಕರಿಸಿದ್ದೇಶ್ವರ ಮಠದಲ್ಲಿ ಸಂಗ್ರಹಿಸಿಡಲಾಗಿದೆ. ಚನ್ನವೀರಸ್ವಾಮಿಗಳ ವೈಯಕ್ತಿಕ ವಿವರಗಳು ಸಹ ಲಭ್ಯವಿರುವುದಿಲ್ಲ.

- **ಕಂದಿಕೆರೆ ಶಾಂತಪ್ಪ**

ಶಿರಾ ತಾಲೂಕಿನ ರಾಮಲಿಂಗಪುರದವರು ಬಾಲ್ಯದಿಂದಲೇ ವೈರಾಗ್ಯ ಬದುಕಿಗೆ ಆಕರ್ಷಿತರಾಗಿ ಊರೂರು ಅಲೆದಾಡಿದ್ದಾರೆ. ಮುಸ್ತೂರಿನ ಹುಚ್ಚು ನಾಗ ಲಿಂಗ ಸ್ವಾಮಿಗಳಿಂದ ಗುರು ದೀಕ್ಷೆ ಕೊಂಡಿದ್ದಾರೆ. ಜಗಳೂರಿನ ಕಣಕುಪ್ಪೆ ಮಠದಲ್ಲಿದ್ದ ಇವರು ಹಠಯೋಗ ಸಾಧಕರೆಂದು ಹೆಸರು ಪಡೆದಿದ್ದವರು. ತುಮಕೂರು, ಚಿತ್ರದುರ್ಗ, ದಾವಣಗೆರೆ ಜಿಲ್ಲೆಯ ಅನೇಕ ಗ್ರಾಮಗಳಲ್ಲಿ ಇವರ ಜ್ಞಾಪಕ ಸಮಾಧಿಗಳಿವೆ. ಚಿತ್ರದುರ್ಗ ಜಿಲ್ಲೆಯಲ್ಲಿ 30ಕ್ಕೂ ಹೆಚ್ಚು ಜ್ಞಾಪಕ ಸಮಾಧಿಗಳಿವೆ. ಹುಳಿಯಾರು ಸಮೀಪದ ಕಂದಿಕೆರೆಯಲ್ಲಿ ನಿಜ ಸಮಾಧಿಯ ಗದ್ದುಗೆ ಇದೆ. ಅಲ್ಲಿಗೆ ನಿತ್ಯವೂ ನೂರಾರು ಭಕ್ತರು ತಮ್ಮ ಸಮಸ್ಯೆಗಳೊಂದಿಗೆ ಆಗಮಿಸುತ್ತಾರೆ. ಶಾಂತವಧೂತರು ಅಲೆದಾಡಿದ, ತಂಗಿದ, ಸಮಾಧಿಯಾದ ಸ್ಥಳಗಳಲ್ಲಿ ಅವರ ಅನುಯಾಯಿಗಳಿದ್ದು ಶಾಂತವಧೂತ ಎನ್ನುವ ಅಂಕಿತದ ಗುರುಸ್ತುತಿ ಮತ್ತು ತತ್ವಪದಗಳನ್ನು ಹಾಡುತ್ತಾರೆ.

- **ಹೊನ್ನೇನಹಳ್ಳಿ ದಾಸಗಿರಿಯಪ್ಪ (1901–2003)**

ಇವರು ತಾನೇ ರಚಿಸಿದ ತತ್ವಪದಗಳನ್ನು ಹಾಡುತ್ತಾ, ಮಣ್ಣಿನಿಂದ ಗೊಂಬೆಗಳನ್ನು ಮಾಡುತ್ತಿದ್ದ ಕಾಯಕ ಜೀವಿ ದಾಸಗಿರಿಯಪ್ಪನವರು. ಹೊಸದುರ್ಗ ತಾಲೂಕಿನ ಹೊನ್ನೇನಹಳ್ಳಿ ನಾಯಕ ಸಮುದಾಯದವರು. ಗೊಂಬೆಗಳನ್ನು ಮಾಡುವುದರ ಜೊತೆಗೆ ಚಿತ್ರಗಳನ್ನು ಬಿಡಿಸುವುದರಲ್ಲಿಯೂ ನಿಪುಣರು. ದಾಸಯ್ಯನ ಮುದ್ರೆ ಹಾಕಿಸಿಕೊಂಡಿದ್ದರಿಂದ ದಾಸ ಗಿರಿಯಪ್ಪ ಹೆಸರು ರೂಢಿಗೆ ಬಂದಿದೆ. ಸಂಸಾರಿಯಾಗಿದ್ದ ಇವರು ಜೀವನ ನಿರ್ವಹಣೆಗೆ ಆಯ್ಕೆ ಮಾಡಿಕೊಂಡಿದ್ದು ಗೊಂಬೆ ಮಾಡುವ ಕಾಯಕವನ್ನು. ಗಣಪತಿ, ಬಸವಣ್ಣ, ನವಿಲು, ಜಿಂಕೆ, ಟಗರು ಮೊದಲಾದ ಗೊಂಬೆಗಳನ್ನು ಆಕರ್ಷಕವಾಗಿ ಮಾಡುತ್ತಿದ್ದು ನೋಡುಗರಿಗೆ ಆಧ್ಯಾತ್ಮದ ಅನುಭವ ಮೂಡುವಂತೆ ಮಾಡುತ್ತಿದ್ದರೆಂದು ಅನುಯಾಯಿಗಳು ನೆನೆಯುತ್ತಾರೆ. ದಾಸಗಿರಿಯಪ್ಪನವರು ಅದೇ ತಾಲೂಕಿನ ಸನ್ಯಾಸಿಕೆರೆಯ ಬೆತ್ತದ ರಂಗಪ್ಪ ಸ್ವಾಮಿಗಳ ಶಿಷ್ಯರಾಗಿದ್ದಾರೆ. ಅವರಿಂದ ದೀಕ್ಷೆ ಪಡೆದು ಅನುಭವ ಮಾರ್ಗದ ಆದಿ ಹಿಡಿದಿದ್ದಾರೆ.

ಗೊಂಬೆಗಳನ್ನು ಮಾರುತ್ತಾ ಊರೂರು ಅಲೆದಾಡಿದ್ದಾರೆ. ಹುಲಿತೊಟ್ಲು, ಚಿಕ್ಕರಣ್ಣನ ಮಾಳಿಗೆ, ವದ್ದಿಕೆರೆ, ಕೊಳಹಾಳು, ಚಿತ್ರದುರ್ಗ, ಕೆರೆಯಾಗಳ ಹಳ್ಳಿ, ಕಿಟ್ಟದಾಳು, ತುಮಕೂರು ಮೊದಲಾದ ಕಡೆ ಅನೇಕ ದಿನಗಳ ಕಾಲ ಅಲ್ಲಲ್ಲಿಯೇ ತಂಗಿದ್ದಾರೆ. ಕಾಯಕವನ್ನು ಮಾಡುವಾಗ ಮೂಡಿದ ಅನುಭವವನ್ನು ಕೋಲಾಳು ಕೆಂಚಾವಧೂತರ ಅಂಕಿತನಾಮದೊಂದಿಗೆ ತತ್ವಪದಗಳಾಗಿ ಹಾಡಿದ್ದಾರೆ. ಅಲ್ಲಿನ ಭಜನೆ ಸಂಘದವರುಂದಿಗೆ ತಾವೇ ರಚಿಸಿದ ಕೆಂಚಾವಧೂತ, ನಾಯಕನಹಟ್ಟಿ ತಿಪ್ಪೇಸ್ವಾಮಿಯ ಬಗೆಗಿನ ತತ್ವಗಳನ್ನು ಹಾಡುತ್ತಾ ಧ್ವನಿಗೂಡಿಸಿದ್ದಾರೆ. ಜೊತೆಗೆ ಹಾಡುವುದನ್ನು ಕಲಿಸಿದ್ದಾರೆ. ಭಕ್ತಿ, ಜ್ಞಾನ, ವೈರಾಗ್ಯ ಗುರು ಮಹತ್ವ ಸದಾಚಾರ ಮೊದಲಾದ ವಸ್ತುಗಳನ್ನು ಒಳಗೊಂಡಂತೆ ಕಣ್ಣಿಗೆ ಬಿದ್ದ ಮನಸಿನಲ್ಲಿ ಮೂಡಿದ ಘಟನೆಗಳು ಕೂಡ ತತ್ವಪದದ ವಸ್ತುಗಳಾಗಿವೆ. ಕೊಳಾಳು ಕೆಂಚಾವಧೂತ ಮತ್ತು ಹೊನ್ನೇನಹಳ್ಳಿ ದಾಸ ಈ ಅಂಕಿತವಿರುವ ಹಾಡುಗಳನ್ನು ಅನೇಕ ಭಜನ ತಂಡಗಳು ಇಂದಿಗೂ ಹಾಡುತ್ತಾರೆ. ಇವರ ಪ್ರಕಾರ ದಾಸಗಿರಿಯಪ್ಪ ಅವರು ಹೆಚ್ಚು ಕಾಲ ಕೆರೆಯಾಗಳಹಳ್ಳಿಯಲ್ಲಿ ವಾಸ ಮಾಡಿದ್ದು, ಅದೇ ಊರಿನಲ್ಲಿ ಅವರ ಮಗಳು ಇದ್ದರು ಎಂಬ ಮಾಹಿತಿ ಸಿಗುತ್ತದೆ. ಕೊನೆಗೆ ಹೊಸದುರ್ಗ ತಾಲೂಕಿನ ಸಣ್ಣಕಿಟ್ಟದಹಳ್ಳಿಯ ಗೊಲ್ಲರಹಟ್ಟಿಯಲ್ಲಿ ವಾಸವಾಗಿದ್ದು ಅಲ್ಲಿಯೇ ಸಮಾಧಿಯಾಗಿದ್ದಾರೆ. ಅದೇ ಸ್ಥಳದಲ್ಲಿ ಗದ್ದುಗೆ ಮತ್ತು ಮಂಟಪವನ್ನು ನಿರ್ಮಾಣ ಮಾಡಿದ್ದಾರೆ.

- **ಶಿವಾನಂದ ಸುಬ್ರಮಣ್ಯ**

ಈತ ಮೈಸೂರಿನವನಾಗಿದ್ದು ನಾಲ್ವಡಿ ಕೃಷ್ಣರಾಜಒಡೆಯರಿಂದ ಪೋಷಿತನಾಗಿದ್ದನೆಂದು ಇದು ಬರುತ್ತದೆ. ಇವರ ಕಾಲಮಾನ 19ನೇ ಶತಮಾನದ ಆರಂಭದ ಕಾಲ. ಈತನ ತತ್ವಪದಗಳನ್ನು ತುಮಕೂರು ಜಿಲ್ಲೆಯಲ್ಲಿ ವಿಶೇಷವಾಗಿ ಹಾಡುತ್ತಾರೆ. ಇಲ್ಲಿ ಸಂಗ್ರಹಿತವಾಗಿರುವ ತತ್ವಪದಗಳು ಶಿವಪ್ಪನೆಂಬ ಸಾಧಕನ ಹಸ್ತಪ್ರತಿಗಳಲ್ಲಿ ದೊರೆತವು. ಶಿವಾನಂದ ಸುಬ್ರಮಣ್ಯನು 'ವೇದಾಂತ ದೀಪಿಕೆ' ಎಂಬ ಇನ್ನೊಂದು ಗ್ರಂಥವನ್ನು ರಚಿಸಿದನೆಂದು ಅದನ್ನು ಮೈಸೂರು ಗ್ರಾಜುಯೇಟ್ ಟ್ರೇಡಿಂಗ್ ಅಸೋಸಿಯೇಷನ್ ನವರು 1866 ರಲ್ಲಿ ಮುದ್ರಿಸಿದರೆಂದು ತಿಳಿದು ಬರುತ್ತದೆ. ಶಂಕರಾ ಅದ್ವೈತಿಯಾದ ಶಿವಾನಂದ ಸುಬ್ರಹ್ಮಣ್ಯರು ಶಂಕರಾನಂದಯೋಗಿಯಂತೆ ಅದ್ವೈತ ಪ್ರಸ್ತಾನದವನೆಂದು ತಿಳಿದು ಬರುತ್ತದೆ. ತತ್ವಪದ ಪರಂಪರೆಯಲ್ಲಿ ಶಂಕರಾ ಅದ್ವೈತಕ್ಕಿರುವ ವ್ಯಾಖ್ಯಾನ ಮತ್ತು ನಿಲುವುಗಳು ಬೇರೆಯಾಗಿದ್ದು, ಅದನ್ನು ವೈದಿಕ ಪರಂಪರೆಯ ನಿಲುವಿನ ಜೊತೆ ಸಾಮಾನ್ಯೀಕರಿಸಿ ಗ್ರಹಿಸಲಾಗಿದೆ. ಶಿವಾನಂದ ಸುಬ್ರಮಣ್ಯರ ತತ್ವಪದಗಳ ನಿರ್ದಿಷ್ಟವಾದ ತಾಳ–ರಾಗಗಳ ಸೂಚಿಯೊಂದಿಗೆ ಹಸ್ತಪ್ರತಿಯಲ್ಲಿ ದೊರೆತವು.

- **ಮಲ್ಲಿಕಾರ್ಜುನ ಶಿವಾನಂದ**

ಇವರ ತತ್ವಪದಗಳು ಪಾವಗಡ ತಾಲ್ಲೂಕಿನ ಅಚಲ ಪರಂಪರೆಯ ಸಾಧಕರಾಗಿರುವ ಶ್ರೀ ಮಲ್ಲಿಕಾರ್ಜುನ ಶಿವಾನಂದರು ಕಟ್ಟಿದ ರಚನೆಗಳಾಗಿವೆ. ಕೋಲಾರ, ಬಳ್ಳಾರಿ ಮತ್ತು ತುಮಕೂರು ಜಿಲ್ಲೆಯ ಗಡಿನಾಡಿನ ಭಾಗಗಳಲ್ಲಿ ವಿಶೇಷವಾಗಿ ತೆಲುಗು ದ್ವಿಭಾಷಾ ಪ್ರದೇಶಗಳಲ್ಲಿ ವ್ಯಾಪಕವಾಗಿರುವ ಅಚಲ ಪರಂಪರೆಯು ಇಂದಿಗೂ ಅತ್ಯಂತ ಗಂಭೀರ ಸಾಧನಾ ಪ್ರಸ್ಥಾನವಾಗಿದೆ. ಅಚಲ ಪರಂಪರೆಯಲ್ಲಿ ಕನ್ನಡ ಮತ್ತು ತೆಲುಗು ಭಾಷೆಗಳಲ್ಲಿ ಸಮಾನ ತತ್ವಪದಗಳಿದ್ದು ತಾತ್ವಿಕವಾಗಿ ಬೌದ್ಧ ತಾತ್ವಿಕತೆಯ ಅನುಸಂಧಾನವಾಗಿದೆ.

- **ನಿಡುಗಲ್ಲು ಚೆನ್ನಪ್ಪ**

ಶರಣ ಲೀಲಾಮೃತ ಕವಿಯೆಂದೇ ಪ್ರಸಿದ್ಧರಾದ ವೀರಶೈವ ಕವಿಯಾದ ಚೆನ್ನಪ್ಪನು ತುಮಕೂರು ಜಿಲ್ಲೆಯ ಪಾವಗಡ ತಾಲೂಕಿನ ನಿಡುಗಲ್ಲು ಪರಿಸರಕ್ಕೆ ಸೇರಿದವರಾಗಿದ್ದು, ದೇಸಿ ಛಂದೋ ಪ್ರಕಾರಗಳಾದ ವೃತ್ತ, ಕಂದ, ಷಟ್ಪದಿ, ತ್ರಿವುಡೆ, ಆಟತಾಳ, ತ್ಯಾಗಮಾನ, ಜಂಪೆ, ಕೊಂಚಜಂಪೆ, ಛಲತಾಳ, ಏಕತಾಳ, ಸಾಂಗತ್ಯ, ದ್ವಿಪದಿ, ರಗಳೆ ಮೊದಲಾದವುಗಳಲ್ಲಿ ಸಾಹಿತ್ಯವನ್ನು ರಚಿಸಿದ್ದಾರೆ. ಶಿವಶರಣ ಚೆನ್ನಪ್ಪನು ಶರಣ ಲೀಲಾಮೃತ, ಬಸವೇಶ್ವರ ಕಾಲಜ್ಞಾನ,

ನಿಡುಗಲ್ಲು ದುರ್ಗದ ಶಿಖರದ ಬಸವನ ಜಾತ್ರೆಯ ತಾರಾವಳಿ, ನಿಡುಗಲ್ಲು ವೀರಭದ್ರಾಷ್ಟಕ ಮತ್ತು ನಿಡುಗಲ್ಲು ದುರ್ಗಾಷ್ಟಕ ಕೃತಿಗಳನ್ನು ರಚಿಸಿದ್ದಾನೆ. ಚನ್ನಪ್ಪನ ಕಾಲದ ಬಗ್ಗೆ ಹಲವಾರು ವಿದ್ವಾಂಸರು ಚರ್ಚಿಸಿದ್ದು, 18ನೇ ಶತಮಾನದ ಆದಿಭಾಗದಲ್ಲಿ ಜೀವಿಸಿದ್ದಿರಬಹುದೆಂದು ಕೆಲವು ಸಾಹಿತ್ಯಿಕ ಆಧಾರಗಳ ಮಾಹಿತಿ ಲಭ್ಯವಾಗುತ್ತದೆ. ಅವರು ಬದುಕಿದಂತಹ ಪರಿಸರದ ಮಹಿಮೆ, ಭಕ್ತಿ, ಶ್ರೇಷ್ಠತೆ, ವೈಭವಗಳನ್ನು ತಮ್ಮ ಕಾವ್ಯಗಳಲ್ಲಿ ದಾಖಲಿಸಿದ್ದಾರೆ.

ಸಾಮಾನ್ಯವಾಗಿ ಬಹುತೇಕ ತತ್ವಪದಕಾರರು, ಸ್ವರವಚನಕಾರರು, ಆರೂಢರು, ಅವಧೂತರು, ಕಾಲಜ್ಞಾನಿಗಳು, ಸೂಫಿಗಳು, ಆಜೀವಿಕರು, ಸಿದ್ಧರು ಇನ್ನು ಮುಂತಾದ ಅಲಕ್ಷಿತ ಸಾಹಿತ್ಯ ಪರಂಪರೆಯ ಅಂದಿನ ಕಾಲದ ಸಾಮಾಜಿಕ, ಆರ್ಥಿಕ, ಧಾರ್ಮಿಕ, ರಾಜಕೀಯ ವಿಷಯಗಳ ಜೋತೆ ಮಾನವಿಕ ಮೌಲ್ಯಗಳನ್ನು ಸಾರಿದ್ದಾರೆ. ತತ್ವಪದಕಾರರು ಸಮಾಜ ವ್ಯವಸ್ಥೆಯ ಜೊತೆ ಜೊತೆಗೆ ನಡಿಗೆ ಆರಂಭಿಸಿ ಜನಸಾಮಾನ್ಯರಲ್ಲಿ ಬದಲಾವಣೆಯನ್ನು ಹಾಗೂ ಎಚ್ಚ-ರಿಕೆಯನ್ನು ಸಾರಿದ್ದಾರೆ.

**ಪರಾಮರ್ಶನ ಗ್ರಂಥಗಳು:**


1. ಅಮರೇಶ ನುಗಡೋಣಿ: ತತ್ವಪದ ಸಾಹಿತ್ಯ ಅಧ್ಯಯನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2014.
2. ಉಜ್ಜಜ್ಜಿ ರಾಜಣ್ಣ: ಶಿವಾನಂದ ಸುಬ್ರಹ್ಮಣ್ಯ ಮತ್ತು ಇತರ ತತ್ವಪದಗಳು (ಸಂ) ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ, ಕನ್ನಡ ಪುಸ್ತಕ ಪ್ರಾಧಿಕಾರ, ಕರ್ನಾಟಕ ಸಮಗ್ರ ತತ್ವಪದಗಳ ಜನಪ್ರಿಯ ಸಾಹಿತ್ಯ ಮಾಲೆ, ಮೇ. ಪೆಂಟಾಪ್ಲಸ್ ಪ್ರಿಂಟರ್ಸ್. ಪ್ರೈ. ಲಿ., ರಾಜಾಜಿನಗರ–ಬೆಂಗಳೂರು, 2017.
3. ಕಲ್ಲೂರು ರುದ್ರಮುನಿದೇವ ಮತ್ತು ಇತರ ತತ್ವಪದಗಳು (ಸಂ) ಉಜ್ಜಜ್ಜಿ ರಾಜಣರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ, ಕನ್ನಡ ಪುಸ್ತಕ ಪ್ರಾಧಿಕಾರ, ಕರ್ನಾಟಕ ಸಮಗ್ರ ತತ್ವಪದಗಳ ಜನಪ್ರಿಯ ಸಾಹಿತ್ಯ ಮಾಲೆ, ಮೇ. ಪೆಂಟಾಪ್ಲಸ್ ಪ್ರಿಂಟರ್ಸ್. ಪ್ರೈ. ಲಿ., ರಾಜಾಜಿನಗರ–ಬೆಂಗಳೂರು, 2017.
4. ಕರಿಯಪ್ಪ ಮಾಳಿಗೆ ಜೆ.: ಹೊನ್ನೇನಹಳ್ಳಿ ದಾಸಗಿರಿಯಪ್ಪ ಸಕ್ರಪ್ಪತಾತ ಮತ್ತು ಇತರ ತತ್ವಪದಗಳು (ಸಂ) ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ, ಕನ್ನಡ ಪುಸ್ತಕ ಪ್ರಾಧಿಕಾರ, ಕರ್ನಾಟಕ ಸಮಗ್ರ ತತ್ವಪದಗಳ ಜನಪ್ರಿಯ ಸಾಹಿತ್ಯ ಮಾಲೆ, ಮೇ. ಪೆಂಟಾಪ್ಲಸ್ ಪ್ರಿಂಟರ್ಸ್. ಪ್ರೈ. ಲಿ., ರಾಜಾಜಿನಗರ–ಬೆಂಗಳೂರು, 2017
5. ಚಕ್ಕೆರೆ ಶಿವಶಂಕರ್: ಹಾಗಲವಾಡಿ ಮುದ್ವೀರಸ್ವಾಮಿ ಮತ್ತು ಇತರ ತತ್ವಪದಗಳು (ಸಂ), ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ, ಕನ್ನಡ ಪುಸ್ತಕ ಪ್ರಾಧಿಕಾರ, ಕರ್ನಾಟಕ ಸಮಗ್ರ ತತ್ವಪದಗಳ ಜನಪ್ರಿಯ ಸಾಹಿತ್ಯ ಮಾಲೆ, ಮೇ. ಪೆಂಟಾಪ್ಲಸ್ ಪ್ರಿಂಟರ್ಸ್. ಪ್ರೈ. ಲಿ., ರಾಜಾಜಿನಗರ–ಬೆಂಗಳೂರು, 2017.
6. ದಂಡಿನಶಿವರ ಮಂಜುನಾಥ್: ತುಮಕೂರು ಜಿಲ್ಲಾ ನೋಟ, ಎಸ್. ವಿ. ಪ್ರಕಾಶನ, ಬೆಂಗಳೂರು, 2021.
7. ನಟರಾಜ ಬೂದಾಳು ಎಸ್: ಶಂಕರಾನಂದ ಯೋಗಿ ಮತ್ತು ಶಂಕರಾರ್ಯರ ತತ್ವಪದಗಳು (ಸಂ), ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ, ಕನ್ನಡ ಪುಸ್ತಕ ಪ್ರಾಧಿಕಾರ, ಕರ್ನಾಟಕ ಸಮಗ್ರ ತತ್ವಪದಗಳ ಜನಪ್ರಿಯ ಸಾಹಿತ್ಯ ಮಾಲೆ, ಮೇ. ಪೆಂಟಾಪ್ಲಸ್ ಪ್ರಿಂಟರ್ಸ್. ಪ್ರೈ. ಲಿ., ರಾಜಾಜಿನಗರ–ಬೆಂಗಳೂರು, 2017.
8. ಶಂಕರಾನಂದ ಯೋಗಿ ಮತ್ತು ಇತರ ತತ್ವಪದಕಾರರ ವಾಚಿಕೆ (ಸಂ), ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಬೆಂಗಳೂರು, 2019.
9. ನಾಗರಾಜಪ್ಪ ಕೆ. ಜಿ.: ಅನುಶ್ರೇಣಿ–ಯಜಮಾನಿಕೆ, ಅಭಿನವ ವಿಜಯನಗರ, ಬೆಂಗಳೂರು. ಎರಡನೇ ಮುದ್ರಣ 2018 (ಮೊದಲ ಮುದ್ರಣ 2015)
10. ಡಾ .ನಂಜುಂಡಸ್ವಾಮಿ, ಕಲ್ಪಸಿರಿ (ಸಂ), ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 2002.
11. ಬರಗೂರು ರಾಮಚಂದ್ರಪ್ಪ (ಪ್ರ.ಸಂ), ಕನ್ನಡ ತತ್ವಪದಗಳು (ಸಂ), ಶಿವದಾಸ ಗೀತಾಂಜಲಿ ಮತ್ತು ಕರ್ನಾಟಕ ಸಾಹಿತ್ಯ ಅಕಾಡೆಮಿ, 1993.
12. ಮೀನಾಕ್ಷಿ ಬಾಳಿ: ಮಹಿಳಾ ತತ್ವಪದಕಾರರು (ಸಂ), ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ, ಕನ್ನಡ ಪುಸ್ತಕ ಪ್ರಾಧಿಕಾರ, ಕರ್ನಾಟಕ ಸಮಗ್ರ ತತ್ವಪದಗಳ ಜನಪ್ರಿಯ ಸಾಹಿತ್ಯ ಮಾಲೆ, ಮೇ. ಪೆಂಟಾಪ್ಲಸ್ ಪ್ರಿಂಟರ್ಸ್. ಪ್ರೈ. ಲಿ., ರಾಜಾಜಿನಗರ–ಬೆಂಗಳೂರು, 2017.
13. ರಾಧ ಕೆ. ಎಂ., ಕಲ್ಪತರು ನಾಡಿನ (ತುಮಕೂರು ಜಿಲ್ಲೆ) ಆಧುನಿಕ ಪೂರ್ವ ಕಾಲದ ಕವಿಗಳು ಹಾಗೂ ಕೃತಿಗಳು ಒಂದು ಅಧ್ಯಯನ, (ಅಪ್ರಕಟಿತ ಮಹಾಪ್ರಬಂಧ), 2019.
14. ವೀರೇಶ ಕೆ ಬಡಿಗೇರ, ಉತ್ತರ ಕರ್ನಾಟಕ ಗೀತಮೇಳಗಳು (ಸಂ), ವಿಮೋಚನಾ ಪ್ರಕಾಶನ, ದೇವದಾಸಿ ಪುನರ್ವಸತಿ ಕೇಂದ್ರ, ಅಥಣಿ. 1999.
15. ಶ್ರೀ ಪಂಚಾಕ್ಷರಿ ಬಿ ಪೂಜಾರಿ – ತತ್ವ ಸಂಪದ (ಸಂ), ಶ್ರೀ ದಂಡಗುಂಡ ಬಸವೇಶ್ವರ ಪ್ರಕಾಶನ, ದಂಡಗುಂಡ–ಕಲ್ಬುರ್ಗಿ, 2015.
16. ಪ್ರೊ. ಡಿ. ವಿ. ಪರಮಶಿವಮೂರ್ತಿ, ಡಾ. ಬಿ. ನಂಜುಂಡಸ್ವಾಮಿ–ಕಾವ್ಯಕಲ್ಪ (ಸಂ), ಕನ್ನಡ ಸಾಹಿತ್ಯ ಪರಿಷತ್ತು ಜಿಲ್ಲಾ ಘಟಕ, ತುಮಕೂರು, 2021.
17. ಕಲ್ಪಸಿರಿ – ಡಾ.ನಂಜುಂಡಸ್ವಾಮಿ (ಸಂ), ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 2002.